**ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ,**
**ರೊದ್ದ ರಸ್ತೆ, ಧಾರವಾಡ-580 008**

ಸಂಖ್ಯೆ:ಸಿ5/ವರ್ಗಾವಣೆ/ಮುಶಿ/50/2013-14 ದಿನಾಂಕ:-22-06-2013

-;ಪತ್ರಿಕಾ ಪ್ರಕಟಣೆ ;-

2013-14 ನೇ ಸಾಲಿನ ಸರಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ಮತ್ತು ವಿಷಯ ಪರಿವೀಕ್ಷರುಗಳು ದೈಹಿಕ ಶಿಕ್ಷಣ ಮತ್ತು ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ಅಧಿಕಾರಿಗಳ ಹಾಗೂ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರಂತೆ ಕೌನ್ಸಿಲಿಂಗ ಮೂಲಕ ನಡೆಸುವ ವರ್ಗಾವಣೆಯಲ್ಲಿ ತೀವ್ರ ಕಾಯಿಲೆಯ ಪ್ರಕರಣದಲ್ಲಿ(ಕ್ಯಾನ್ಸರ್,ಕಿಡ್ನಿ ವೈಫಲ್ಯ ಹೃದಯ ಸಂಬಂದ ಕಾಯಿಲೆ) ಬೆಳಗಾವ ವಿಭಾಗದ ಜಿಲ್ಲೆಗಳಿಂದ ಅರ್ಜಿ ಸಲ್ಲಿಸಿರುವ ಶಿಕ್ಷಕರು ದಿನಾಂಕ 24-06-2013 ರಿಂದ 25-06-2013 ವರೆಗೆ ಬೆಳಗಾವಿಯ ಜಿಲ್ಲಾ ಸರ್ಕಾರಿ ಆಸ್ಪತ್ರೆ (ಬಿಮ್ಸ)ಯಲ್ಲಿ ತೀವ್ರ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯೊಂದಿಗೆ ತೀವ್ರತರ ಕಾಯಿಲೆಗಳಿಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳಿಗೊಂದಿಗೆ ವೈಧ್ಯಕೀಯ ಪರೀಕ್ಷೆಗೆ ಹಾಜರಿರಲು ಸೂಚಿಸಿದೆ. ಸದರ ವೈಧ್ಯಕೀಯ ಪರೀಕ್ಷೆಗೆ ಹಾಜರಾಗದಿದ್ದಲ್ಲಿ ವರ್ಗಾವಣೆ ಕೌನ್ಸಲಿಂಗದಲ್ಲಿ ತೀವ್ರತರ ಕಾಯಿಲೆಯ ಆಧ್ಯತೆಯನ್ನು ಪರಿಗಣಿಸಲು ಅವಕಾಶ ಇರುವುದಿಲ್ಲ.

ಈ ಸಂಬಂಧವಾಗಿ ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿಯ ಜಿಲ್ಲೆಗಳ ಉಪನಿರ್ದೇಶಕರ ಕಚೇರಿಯ ವರ್ಗಾವಣೆಗೆ ಸಂಬಂಧಿಸಿದ ನೋಡಲ್ ಅಧಿಕಾರಿಗಳು ಮೇಲ್ಕಂಡ ದಿನಾಂಕಗಳಂದು ಬೆಳಗಾವಿಯ ಜಿಲ್ಲಾ ಸರ್ಕಾರಿ ಆಸ್ಪತ್ರೆ (ಬಿಮ್ಸ)ದಲ್ಲಿ ಹಾಜರಿದ್ದು ತಮ್ಮ ಜಿಲ್ಲಾ ವ್ಯಾಪ್ತಿಯ ಶಿಕ್ಷಕರ ವೈಧ್ಯಕೀಯ ಪರೀಕ್ಷೆಯ ಕಾರ್ಯ ನಿರ್ವಹಿಸುವುದು.

ಈ ಬಗ್ಗೆ ದಿನಾಂಕ:22-06-2013ರಂದು ಇಲಾಖೆಯಿಂದ ಸುತ್ತೋಲೆ ಹೊರಡಿಸಿದೆ. ಹೆಚ್ಚಿನ ಮಾಹಿತಿಯು ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಲಭ್ಯವಿರುವುದು.

(ಎ.ಎನ್.ಪಾಟೀಲ್)
ಅಪರ ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಧಾರವಾಡ